# ಸುದ್ದಿ ಸಂಚಯ

## ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜನ್ಮೋತ್ಸವ

೨೦೦೩ನೇ ವರ್ಷವು ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿಯವರ ಪ್ರಿಯ ಸಂತಾನರೆಲ್ಲರಿಗೂ ಆನಂದದಾಯಕ, ಶುಭಕರ, ಪರಮ ಸೌಭಾಗ್ಯದ ವರುಷ; ಸನ್ಮಂಗಲವನ್ನು ಉಂಟುಮಾಡುವ ಮಂಗಲ ವರುಷ. ಏಕೆಂದರೆ ಅಸಾಮಾನ್ಯ ಮಹಿಳೆಯು ಸಾಮಾನ್ಯ ಮಹಿಳೆಯಂತೆ ಧರೆಗಿಳಿದು ಒಂದೂವರೆ ಶತಕಗಳು ಕಳೆದವು! ಶ್ರೀಮಾತೆಯವರ ೧೫೦ನೇ ಜನ್ಮದಿನೋತ್ಸವವನ್ನು ದೇಶಾದ್ಯಂತ ಶ್ರೀರಾಮಕೃಷ್ಣ ಮಠ ಹಾಗೂ ಮಿಷನ್‌ಗಳು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ಇಂತಹ ಪುಣ್ಯಕರ ಹಬ್ಬವನ್ನು ತಮಿಳುನಾಡಿನ ರಾಮಕೃಷ್ಣ ಮಠದ ಉತ್ಸಾಹೀ ಭಕ್ತರು ವಿಶೇಷ ರೀತಿಯಲ್ಲಿ ಆಚರಿಸಲು ನೂತನ ಯೋಜನೆಯೊಂದನ್ನು ಆಯೋಜಿಸಿದ್ದಾರೆ. ಅದೇ ತಮಿಳುನಾಡು ಮತ್ತು ಪಾಂಡಿಚೆರಿ ರಾಜ್ಯವ್ಯಾಪ್ತಿಯಲ್ಲಿ ನಡೆಯುವ ಶ್ರೀಮಾತೆಯವರ ರಥೋತ್ಸವ. ನವೆಂಬರ್ ಹನ್ನೆರಡನೇ ತಾರೀಖು ಬೆಳಿಗ್ಗೆ ೫.೦೦ ಘಂಟೆಗೆ ವಿಶೇಷ ಪೂಜೆ, ಆರತಿ, ಹೋಮಗಳಿಂದ ಪ್ರಾರಂಭಗೊಂಡು ರಥವು ಬೆಳಿಗ್ಗೆ ೧೦.೦೦ ಘಂಟೆಗೆ ಚೆನ್ನೈನಿಂದ ಹೊರಟು ಕನ್ಯಾಕುಮಾರಿಯವರೆಗೂ ಹೋಗಿ ಪುನಃ ಚೆನ್ನೈ ತಲುಪುವವರೆಗೂ ೨೮ ದಿನಗಳ ಕಾಲಾವಧಿಯಲ್ಲಿ ೩೫೦೦ ಕಿ.ಮೀ. ಸಂಚರಿಸುತ್ತದೆ.

ಶ್ರೀಮಾತೆಯವರ ವಿಶ್ವಪ್ರೇಮ, ಶಾಂತಿ ಭರವಸೆಗಳ ಸಂದೇಶವನ್ನು ಹೊತ್ತ ನಾಲ್ಕೂವರೆ ಅಡಿಯ ಫೈಬರ್ ಗ್ಲಾಸ್‌ನ ಮೂರುತಿಯು ೫೩ ಪಟ್ಟಣಗಳ ಪರ್ಯಟನೆ ಮಾಡುತ್ತಾ ಡಿಸೆಂಬರ್ ೯ರಂದು ಚೆನ್ನೈ ಮಠಕ್ಕೆ ಹಿಂದಿರುಗುತ್ತದೆ. ನಂತರ ಡಿಸೆಂಬರ್ ೧೨ರಿಂದ ಡಿಸೆಂಬರ್ ೧೬ರವರೆಗೆ ಶ್ರೀಮಾತೆಯವರ ಜಯಂತ್ಯುತ್ಸವ ಪ್ರಯುಕ್ತ ಪ್ರಾತಃಕಾಲ ೫ ಗಂಟೆಯಿಂದ ರಾತ್ರಿ ೮.೩೦ರವರೆಗೆ ವಿಶೇಷ ಕಾರ್ಯಕ್ರಮಗಳನ್ನು ಚೆನ್ನೈ ರಾಮಕೃಷ್ಣ ಮಠದಲ್ಲಿ ಏರ್ಪಡಿಸಲಾಗಿದೆ.

ಇದರ ಅಂಗವಾಗಿ ೪ ತಿಂಗಳುಗಳಿಂದ, ಅಂದರೆ ಆಗಸ್ಟ್ ೧೫ರಿಂದಲೇ ಭಕ್ತರು ಚೆನ್ನೈನಗರದ ೨೨ ಸ್ಥಳಗಳಲ್ಲಿ ಕುಂಕುಮಾರ್ಚನೆ, ಸಹಸ್ರನಾಮ, ದೀಪೋತ್ಸವ, ಅನ್ನದಾನ, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಬಹಿರಂಗ ಸಭೆಗಳು, ಮುಂತಾದವುಗಳ ಮೂಲಕ ತಮ್ಮ ಗೌರವಾದರಗಳನ್ನು ಶ್ರೀಮಾತೆಯವರಿಗೆ ಅರ್ಪಿಸುತ್ತಿದ್ದಾರೆ.

ಇಷ್ಟೇ ಅಲ್ಲ, ಜಯಂತ್ಯುತ್ಸವದ ಅಂಗವಾಗಿ ಇನ್ನೂ ಹಲವಾರು ಸ್ಥಾಯೀ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ:

- ಶ್ರೀಮಾತೆಯವರ ಜೀವನ ಮತ್ತು ಸಂದೇಶವನ್ನು ಹೊತ್ತ ಪುಸ್ತಕಗಳನ್ನು ವಿಶೇಷ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ.
- ಚೆನ್ನೈನಿಂದ ಪ್ರಕಟವಾಗುವ ವೇದಾಂತ ಕೇಸರಿ, ಶ್ರೀರಾಮಕೃಷ್ಣ ವಿಜಯಂ, ಶ್ರೀರಾಮಕೃಷ್ಣ ಪ್ರಭ—ಈ ಮೂರು ಮಾಸ ಪತ್ರಿಕೆಗಳ ವಿಶೇಷ ಸಂಚಿಕೆಗಳು ಪ್ರಕಟವಾಗಲಿವೆ.
- **ಶಾರದಾ ಹಿಡಿ ಅಕ್ಕಿ ಯೋಜನೆ** : ಪ್ರತಿದಿನವೂ ಅಡುಗೆ ಮಾಡುವ ಮುನ್ನ ಒಂದು ಹಿಡಿ ಅಕ್ಕಿ ತೆಗೆದಿಡುವುದು. ಹೀಗೆ ಶೇಖರಿಸಿದ ಅಕ್ಕಿಯನ್ನು ಕ್ಷಾಮ, ಅನ್ನದಾನಗಳಲ್ಲಿ ಉಪ ಯೋಗಿಸಲಾಗುವುದು.
- **ಶಾರದಾ ಮಹಿಳಾ ಸ್ವ-ಸಹಾಯ ಸಮುದಾಯ** : ಬಡ ಹೆಂಗಸರು ತಾವೇ ದುಡಿದು ಬದುಕು ಸಾಗಿಸುವಂತಹ ಉದ್ಯಮಗಳಲ್ಲಿ ತರಬೇತಿ ನೀಡುವುದು.
- **ಶಾರದಾ ಗಂಗಾ** : ಬರಗಾಲ ಪೀಡಿತ ಹಳ್ಳಿಗಳಲ್ಲಿ ಬಾವಿ ಅಥವಾ ಕೊಳವೆಬಾವಿಗಳನ್ನು ತೋಡುವುದು.
- **ಭಾವಚಿತ್ರ ವಿತರಣೆ** : ಶಾಲಾ ಕಾಲೇಜು, ಆಸ್ಪತ್ರೆಗಳ ಪ್ರಾರ್ಥನಾ ಮಂದಿರಗಳಲ್ಲಿ ಶ್ರೀಮಾತೆಯವರ ಭಾವಚಿತ್ರವನ್ನು ತೂಗುಹಾಕಲು ನೆರವಾಗುವುದು.
- ಒಂದು ಅನಾಥಾಶ್ರಮ, ಮಹಿಳಾ ಕಾಲೇಜು, ಬಾಲಕಸಂಘಗಳ ಸ್ಥಾಪನೆ, ಗಿಡ ನೆಡುವುದು, ವಿದ್ಯಾದಾನ, ಉಚಿತ ವೈದ್ಯಕೀಯ ನೆರವು ಮುಂತಾದ ಯೋಜನೆಗಳು ಜಾರಿಯಲ್ಲಿವೆ.

### ಜ್ಞಾನವಾಹಿನಿ ಕಾರ್ಯಕ್ರಮಗಳು
### ಡಿಸೆಂಬರ್ 2003

ಶಿವಮೊಗ್ಗ ಜಿಲ್ಲೆಯಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಬಿ.ಆರ್. ಪ್ರಾಜೆಕ್ಟ್‌ನಿಂದ ನವೆಂಬರ್ ೫ ರಂದು ಆರಂಭಗೊಂಡವು. ಇದರಲ್ಲಿ ಗ್ರಾಮೀಣ ಬಂಧುಗಳು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ ಮತ್ತು ದಾಖಲೆಯ ಪ್ರಮಾಣದಲ್ಲಿ ರಾಮಕೃಷ್ಣ –ವಿವೇಕಾನಂದ ಸಾಹಿತ್ಯ ಮಾರಾಟವಾಗುತ್ತಿದೆ.

ಜ್ಞಾನವಾಹಿನಿ ಕಾರ್ಯಕ್ರಮಗಳು ಡಿಸೆಂಬರ್ 5ರಿಂದ ದಾವಣಗೆರೆ ಜಿಲ್ಲೆಯಲ್ಲಿ ಪ್ರಾರಂಭವಾಗುತ್ತವೆ. ಕಾರ್ಯಕ್ರಮಗಳ ವಿವರಗಳನ್ನು ದಾವಣಗೆರೆಯಲ್ಲಿನ ಶ್ರೀಯುತ ಕೆ.ಎಸ್. ನಂದಕುಮಾರ್, ಫೋನ್.ನಂ.232397, ಇವರಿಂದ ಪಡೆಯಬಹುದು. 'ವಿವೇಕಪ್ರಭ' ಪತ್ರಿಕೆಯ ಸ್ಥಳೀಯ ಚಂದಾದಾರರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.